# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 386/2022

| | | |
|---|---|---|
| ಸಾಕ್ಷಿದಾರರ ಹೆಸರು | ಪುನೀತ್ ಬಿ.ಎನ್. | ಪ್ರಮಾಣ ವಚನ ಮಾಡಿದ ದಿನಾಂಕ: 05.01.2026 |
| ತಂದೆಯ/ಗಂಡನ ಹೆಸರು | ನಿಂಗೇಗೌಡ ಬಿ.ಎಲ್. | |
| ವಯಸ್ಸು | 40 ವರ್ಷ | |
| ವೃತ್ತಿ | ಪೊಲೀಸ್ ಇನ್ಸ್‌ಪೆಕ್ಟರ್, ರಾಜಗೋಪಾಲ ನಗರ ಪೊಲೀಸ್ ಠಾಣೆ, ಬೆಂಗಳೂರು | ಪ್ರಾ.ಸಾಃ 09 |
| ವಾಸ ಸ್ಥಳ | ಬೆಂಗಳೂರು | ಚಾ.ಸಾಃ 16 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ *09.08.2018* ರಿಂದ *11.09.2019* ರವರೆಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಕರ್ತವ್ಯ ನಿರ್ವಹಿಸಿದ್ದೇನು.

ನಂಜನಗೂಡು ಪಟ್ಟಣ ಪೊಲೀಸ್ ಠಾಣೆ ಮೊ.ಸಂಖ್ಯೆ *91/2019* ಪ್ರಕರಣದಲ್ಲಿ ಹೆಚ್ಚುವರಿ ಪ್ರಭಾರಿಯಾಗಿ ಮಾನ್ಯ ಮೇಲಾಧಿಕಾರಿಗಳು ಆದೇಶಿಸಿದ ಮೇರೆಗೆ ಕಡತವನ್ನು ಚಾಸಾ–*14* ರವರಿಂದ ಪಡೆದುಕೊಂಡಿದ್ದೇನು ಏಕೆಂದರೆ ನಂಜನಗೂಡು ಪಟ್ಟಣ ಪೊಲೀಸ್ ಠಾಣೆ ಯ ಪಿ.ಎಸ್.ಐ ರವರು ವರ್ಗಾವಣೆ ಯಾದ ಕಾರಣ ಹೆಚ್ಚುವರಿ ಪ್ರಭಾರವನ್ನು ನೀಡಿದ್ದರು.

ದಿನಾಂಕ *02.11.2019* ರಂದು ಸದರಿ ಪ್ರಕರಣದ ಕಡತವನ್ನು ಚಾಸಾ–*14* ರವರಿಂದ

ಪಡೆದುಕೊಂಡು ಆರೋಪಿಪತನ ಪತ್ತೆಗಾಗಿ ಚಾಸಾ–*12* ರವರೊಂದಿಗೆ ಬೆಂಗಳೂರಿಗೆ ಬಂದು ಪ್ರಕರಣದ ಆರೋಪಿಯಾದ ಸುನೀಲ್ ಕುಮಾರ್ ಬಿನ್ ಲೇಟ್ ಎನ್.ಎಸ್. ಚಾಮರಾಜು ರವರನ್ನು ಆರ್.ಆರ್. ಲೇಔಟ್ ನಾಗದೇವನಹಳ್ಳಿ ಬಳಿ ಸಂಜೆ *5.30* ರಲ್ಲಿ ವಶಕ್ಕೆ ಪಡೆದು ಕೃತ್ಯಕ್ಕೆ ಭಾಗಿಯಾಗಿದ್ದ ವಾಹನ ಸಂಖ್ಯೆ ಕೆಎ–*41*–ಎಂಸಿ–*4591* ಮಾರುತಿ ಬ್ರಿಜಾ ಕಾರ್ ಅನ್ನು ಹೆಚ್ಚಿನ ತನಿಖೆಯ ಸಲುವಾಗಿ ಆರೋಪಿತನ ಪತ್ನಿ ತೇಜಸ್ವಿರವರಿಗೆ ಹಾಜರುಪಡಿಸುವಂತೆ ನೊಟೀಸ್ ನೀಡಿ ಸದರಿ ಆರೋಪಿತನೊಂದಿಗೆ ರಾತ್ರಿ *11.00* ಗಂಟೆಗೆ ಠಾಣೆಗೆ ಬಂದು ಸರ್ವೋಚ್ಚ ನ್ಯಾಯಾಲಯದ ನಿಯಮದಂತೆ ದಸ್ತಗಿರಿ ಕ್ರಮ ಜರುಗಿಸಿ ವೇಳೆಯಾದ ಕಾರಣ ಆರೋಪಿತನನ್ನು ಠಾಣೆಯಲ್ಲಿಯೇ ಸೂಕ್ತ ಬಂದುಬಸ್ತನಲ್ಲಿ ಇರಿಸಿದ್ದೆನು.

ದಿನಾಂಕ *04.11.2019* ರಂದು ಆರೋಪಿತನ ಪತ್ನಿ ತೇಜಸ್ವಿರವರು ಠಾಣೆಯಲ್ಲಿ ಕೃತ್ಯಕ್ಕೆ ಸಂಬಂಧಿಸಿದ ಕೆಎ–*41*–ಎಂಸಿ–*4591* ಮಾರುತಿ ಬ್ರಿಜಾ ಕಾರ್ ಅನ್ನು ಹಾಜರುಪಡಿಸಿದ್ದು ಅದನ್ನು ಪಂಚರಾದ ಚಾಸಾ–*4* ಮತ್ತು *5* ರವರ ಸಮಕ್ಷಮದಲ್ಲಿ ಠಾಣೆಯಲ್ಲಿ ಬೆಳಗ್ಗೆ *8.00* ಗಂಟೆಯಿಂದ *8.45* ಗಂಟೆಯವರೆಗೆ ಮಹಜರ್ ಮುಖೇನ ಅಮಾನತ್ತು ಪಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು ಮಾಲು ಪಟ್ಟಿ ಸಂಖ್ಯೆ *90/2019* ರಲ್ಲಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು. ಸಾಕ್ಷಿದಾರರು ಅಮಾನತ್ತು ಮಹಜರ್ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*11* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು **ನಿಪಿ.*11 (ಬಿ)*** ಎಂದು ಗುರುತಿಸಲಾಯಿತು. ಸಾಕ್ಷಿದಾರರು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ–*2* ರಿಂದ *4* ಎಂದು ಗುರುತಿಸಲ್ಪಟ್ಟಿರುತ್ತವೆ. ಅದೇ ದಿನ ಆರೋಪಿತನನ್ನು

ವೈದ್ಯಕಿಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನು.

ದಿನಾಂಕ *11.11.2019* ರಂದು ವಾಹನ ಸಂಖ್ಯೆ ಕೆಎ-*41*-ಎಂಸಿ-*4591* ಮಾರುತಿ ಬ್ರಿಜಾ ಕಾರ್ ನ ವಾಹನ ತಪಾಸಣೆ ಸಲುವಾಗಿ ಮೋಟಾರು ವಾಹನ ನಿರೀಕ್ಷಕರಿಗೆ ಲಿಖಿತವಾಗಿ ಮನವಿ ಮಾಡಿಕೊಂಡಿದ್ದೆನು.

ನಂತರ ಈ ಪ್ರಕರಣದ ತನಿಖೆಯನ್ನು ಚಾಸಾ-*17* ರವರಿಗೆ ಕಡತದೊಂದಿಗೆ ಒಪ್ಪಿಸಿದ್ದೆನು. ನಾನು ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ** :

ನಾನು ಆರೋಪಿತನನ್ನು ಆರ್.ಆರ್. ಲೇಔಟ್ ನಾಗದೇವನಹಳ್ಳಿಯಲ್ಲಿ ವಶಕ್ಕೆ ಪಡೆದುಕೊಂಡಾಗ ಆ ಸ್ಥಳ ದಲ್ಲಿ ದಸ್ತಗಿರಿ ಮಹಜರ್ ಮಾಡಿರಲಿಲ್ಲ. ಪಂಚರಿಗೆ ನೋಟೀಸ್ ಕೊಟ್ಟಿರಲಿಲ್ಲ ಎಂದರೆ ಸರಿ. ಅಮಾನತ್ತು ಪಂಚನಾಮೆಯಲ್ಲಿ ಯಾರು ವಾಹನವನ್ನು ಹಾಜರುಪಡಿಸಿದ್ದರು ಎನ್ನುವ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ಸರಿ ಅದು ಕಣ್ ತಪ್ಪಿನಿಂದ ಬಿಟ್ಟು ಹೋಗಿರುತ್ತದೆ. ಅಮಾನತ್ತು ಪಂಚನಾಮೆಯಲ್ಲಿ ಚೆಕ್ಕುಬಂದಿ ಇರುವುದಿಲ್ಲ ಎಂದರೆ ಸರಿ, ಸ್ಟೇಶನ್ ಆವರಣದಲ್ಲಿ ಅಮಾನತ್ತು ಪಡಿಸಿಕೊಂಡಿತ್ತು. ಆರೋಪಿತನ ಸ್ವ ಇಚ್ಛಾ ಹೇಳಿಕೆಯನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೆ ಯೂಟ್ಯೂಬ್ ನಲ್ಲಿ ಘಟನೆ ಬಗ್ಗೆ ಬರುತ್ತಿರುತ್ತದೆ ಎಂದು ಹೇಳಿ ವಿಚಾರಣೆಗೆ ಕರೆಸಿ ಆರೋಪಿತನ ವಿರುದ್ಧವಾಗಿ ಸುಳ್ಳು ಕೇಸು ಮಾಡಿದ್ದು ವಿಡಿಯೋ ಡಿಲೀಟ್ ಮಾಡಿಸುವ

ಸಲುವಾಗಿ ಸುಳ್ಳು ಕೇಸು ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವಾಹನವನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**